ನಿಯಮ 72, 147
ಕ್ರಮ ಸಂ. 53

**ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಹಾಗೂ ಶ್ರೀ. ಎಸ್.ಎಲ್. ಭೋಜೇಗೌಡ ಅವರುಗಳ ನಿಯಮ 72 ರಡಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:-**

ರಾಜ್ಯದ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ವರ್ಷಕ್ಕೆ 2 ಕೋಟಿ ರೂ.ಗಳ ಅನುದಾನವನ್ನು ನಿಗಧಿ ಪಡಿಸಲಾಗಿರುತ್ತದೆ. MLA ರವರಿಗೆ 5 ವರ್ಷ MLC ರವರಿಗೆ 6 ವರ್ಷ ಪದಾಧಿಕಾರದವಧಿ ಇರುತ್ತದೆ. ಸದರಿ ಅವಧಿಯಲ್ಲಿ ಬಿಡುಗಡೆಯಾಗುವ ಈ ಅನುದಾನವನ್ನು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗ ಖರ್ಚು ಮಾಡಲಾಗುತ್ತದೆ. ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಅನುಷ್ಠಾನ ಏಜೆನ್ಸಿ ಇಂಜಿನಿಯರಿಂಗ್ ವಿಭಾಗಗಳ ಕಾರ್ಯ ಒತ್ತಡ ವ್ಯವಸ್ಥೆಯಿಂದ 2 ವರ್ಷಗಳದೊಳಗೆ ಅನುದಾನವನ್ನು ಖರ್ಚು ಮಾಡಲು ಕಷ್ಟಸಾಧ್ಯವಿರುತ್ತದೆ. ಸದಸ್ಯರ ಪದಾಧಿಕಾರದವಧಿಯಲ್ಲಿ ತಮ್ಮ ಒಟ್ಟು ಎಲ್ಲಾ ಅನುದಾನವನ್ನು ಖರ್ಚು ಮಾಡುವುದು ವಾಡಿಕೆಯಾಗಿರುತ್ತದೆ.

ಆದರೆ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕರು ದಿನಾಂಕ:17.02.2022 ರಂದು ಸಂಖ್ಯೆ:ಪಿಡಿಎಸ್/82/ಕೆಎಲ್ಎಸ್/2022 (ಭಾಗ-1) ಪತ್ರದಲ್ಲಿ ಮಾನ್ಯ ಸಭಾಧ್ಯಕ್ಷರೊಂದಿಗೆ ಸಭೆ ನಡೆಸಿ ನಿರ್ಧಾರ ಕೈಗೊಂಡು ಮಾನ್ಯ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರ ಅಧಿಕಾರವನ್ನು ಮೊಟಕುಗೊಳಿಸಿ ನಮ್ಮ ಅನುದಾನವನ್ನು ಹಿಂಪಡೆಯುವ ಆದೇಶ ಮಾಡಿರುವುದು ನಿಜಕ್ಕೂ ದುರದೃಷ್ಟಕರ. ಇದರ ಸಂಬಂಧ ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ನೀಡಿದ ಭರವಸೆಯಂತೆ ಆದೇಶವನ್ನು ಮಾಡಿರುವುದಿಲ್ಲ. ಆದ್ದರಿಂದ ಈ ಆದೇಶವನ್ನು ರದ್ದುಗೊಳಿಸುವುದರೊಂದಿಗೆ ಇದರ ಸಂಬಂಧ ಮಾನ್ಯ ಸಭಾಪತಿಯವರು ದಿನಾಂಕ:21.02.2022 ರಂದು ಬರೆದಿರುವ ಪತ್ರದಂತೆ ಆದೇಶ ಹೊರಡಿಸಬೇಕೆಂದು ಮಾನ್ಯ ತೋಟಗಾರಿಕೆ, ಯೋಜನೆ ಹಾಗೂ ಸಾಂಖ್ಯಿಕ ಸಚಿವರ ಗಮನ ಸೆಳೆಯ ಬಯಸುತ್ತೇವೆ.

**ಉತ್ತರ:-**

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಕಂಡಿಕೆ 4.1ರಂತೆ ಮಾನ್ಯ ಶಾಸಕರುಗಳು ಪ್ರಸ್ತಾಪಿಸಿದ ಕಾಮಗಾರಿಗಳು ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಂಡು ಎರಡು ವರ್ಷದೊಳಗೆ ಪ್ರಾರಂಭವಾಗದಿದ್ದಲ್ಲಿ ಅಂತಹ ಕಾಮಾಗಾರಿಗಳನ್ನು ಮುಂದಿನ ವರ್ಷದಲ್ಲಿ ಪ್ರಾರಂಭ ಮಾಡಲು ಅವಕಾಶವಿರುವುದಿಲ್ಲ. ಇಂತಹ ಕ್ರಮಗಳಿಂದಾಗಿ 2000-01 ನೇ ಸಾಲಿನಿಂದ ಹಲವಾರು ಕಾಮಾಗಾರಿಗಳು ಪ್ರಾರಂಭವಾಗದೇ ಅನುದಾನ ಉಳಿತಾಯವಾಗಿದ್ದು, ಆರಂಭಿಕ ಶಿಲ್ಕು ಮತ್ತು ಬಿಡುಗಡೆ ಅನುದಾನ ಸೇರಿದಂತೆ ಒಟ್ಟು ಅನುದಾನದಲ್ಲಿ ಶೇ.75 ರಷ್ಟು ವೆಚ್ಚವಾಗದೇ ಆರ್ಥಿಕ ಇಲಾಖೆಯು ಅನುದಾನ ಬಿಡುಗಡೆಗೆ ಸಹಮತಿ ನೀಡದ ಕಾರಣದಿಂದ 2018-19 ಹಾಗೂ 2019-20 ನೇ ಸಾಲಿನಲ್ಲಿ ನಿಗಧಿತ ಅನುದಾನ ಬಿಡುಗಡೆಗೆ ಸಮಸ್ಯೆ ಆಗಿದ್ದ ಕಾರಣ ದಿನಾಂಕ:03.08.2021 ರಂದು ಮಾನ್ಯ ವಿಧಾನ ಪರಿಷತ್ತಿನ ಸಭಾಧ್ಯಕ್ಷರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರ ಅಧ್ಯಕ್ಷತೆಯಲ್ಲಿ ರಾಮನಗರ,ಬೆಂಗಳೂರು ಗ್ರಾಮಾಂತರ,

147

ಬೆಂಗಳೂರು ನಗರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಒಳಗೊಂಡಂತೆ ಐವರು ವಿಧಾನ ಪರಿಷತ್ತಿನ ಸದಸ್ಯರ ಸಮಿತಿಯಲ್ಲಿ ಚರ್ಚಿಸಿ ದಿನಾಂಕ:13.08.2021 ರಂದು ಸುತ್ತೋಲೆ ಹೊರಡಿಸಲಾಗಿರುತ್ತದೆ, ಸದರಿ ಸುತ್ತೋಲೆಯ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸಿ ಅನುದಾನ ಹಿಂಪಡೆಯುವ ಪತ್ರವನ್ನು ತಾತ್ಕಾಲಿಕವಾಗಿ ತಡೆಹಿಡಿಯುವಂತೆ ಮಾನ್ಯ ವಿಧಾನಸಭಾ ಅಧ್ಯಕ್ಷರು ಸೂಚಿಸಿದ್ದರು. ತದನಂತರ ದಿನಾಂಕ:27.01.2022 ರಂದು ಮಾನ್ಯ ವಿಧಾನಸಭಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಯೋಜನಾ ಇಲಾಖೆಯ ಸಚಿವರ ಉಪಸ್ಥಿತಿಯಲ್ಲಿ ಸಭೆ ನಡೆದು, ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ.

1. 2018-19 ನೇ ಸಾಲಿನಿಂದ 2020-21 ನೇ ಸಾಲಿಗೆ ಸಂಬಂಧಪಟ್ಟ ಕಾಮಗಾರಿಗಳು ಈಗಲೂ ಪ್ರಾರಂಭವಾಗದೇ ಇದ್ದಲ್ಲಿ ಸದರಿ ಕಾಮಗಾರಿಗಳನ್ನು ಡಿ.ಸಿ. / ಎ.ಡಿ.ಸಿ. / ಎ.ಸಿ. ರವರು ಗಳಿಂದ ಹಾಗೂ ಸಂಬಂಧ ಪಟ್ಟ ಅಭಿಯಂತರರುಗಳಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸುವುದು. ಮಾರ್ಚ್-2022ರ ಅಂತ್ಯದೊಳಗೆ ಪೂರ್ಣಗೊಳಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವುದು ಹಾಗೂ ಇದಕ್ಕೆ ಸಂಬಂಧಪಟ್ಟ ಅನುದಾನವನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಲು ತೀರ್ಮಾನಿಸಲಾಯಿತು.
2. 2018ರ ಹಿಂದಿನ ಅವಧಿಯಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳು ಪ್ರಾರಂಭವಾಗದೇ ಇದ್ದಲ್ಲಿ ಅಂತಹ ಕಾಮಗಾರಿಗಳ ಅನುದಾನವನ್ನು ರಾಜ್ಯ ಮಟ್ಟದ ಕೇಂದ್ರೀಕೃತ ಉಳಿತಾಯ ಖಾತೆಗೆ ಜಮೆ ಮಾಡಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ದಿನಾಂಕ:16.11.2021 ರ ಪತ್ರದಲ್ಲಿ ಸೂಚಿಸಿರುವಂತೆ ಅಗತ್ಯ ಕ್ರಮ ವಹಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಸದರಿ ಸಭೆಯ ನಿರ್ಣಯದಂತೆ ದಿನಾಂಕ:17.02.2022 ರ ಪತ್ರವನ್ನು ಹೊರಡಿಸಲಾಗಿರುತ್ತದೆ.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಹಾಗೂ ಶ್ರೀ. ಎಸ್.ಎಲ್. ಭೋಜೇಗೌಡ ರವರುಗಳ ನಿಯಮ 72 ರಡಿ ಕೋರಿರುವ ಗಮನ ಸೆಳೆಯುವ ಸೂಚನೆಯನ್ನು ಪರಿಶೀಲಿಸಲಾಗಿದೆ. 2018-19ನೇ ಸಾಲಿನಿಂದ ಈ ಅವಧಿಯ ಶಾಸಕರ ಅನುದಾನವನ್ನಾಗಲಿ 2017-18ನೇ ಸಾಲಿನ ಆರು ವರ್ಷದ ಅವಧಿಯ ವಿಧಾನಪರಿಷತ್ ಸದಸ್ಯರುಗಳ ಅನುದಾನವನ್ನಾಗಲಿ ವಾಪಸ್ ಪಡೆದಿರುವುದಿಲ್ಲ ಹಾಗೂ ವಾಪಾಸ್ ಪಡೆಯುವ ಉದ್ದೇಶವಿರುವುದಿಲ್ಲ. ಹಾಗಾಗಿ ಮಾನ್ಯ ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳ ಅಧಿಕಾರವನ್ನು ಮೊಟಕುಗೊಳಿಸಿರುವುದಿಲ್ಲ ಎಂಬ ಅಂಶವನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

**ಸಂಖ್ಯೆ: ಪಿಡಿಎಸ್ 94 ಕೆಎಲ್ಎಸ್ 2022**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖಾ ಸಚಿವರು